ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

**ಸಿ.ಸಿ. ಸಂಖ್ಯೆ:456/2020**

**ಸಾಕ್ಷಿಯನ್ನು ದಿಃ 27.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ನಾಗೇಶ್ | ಸಿಡಬ್ಲ್ಯೂ:6 | ಪಿಡಬ್ಲ್ಯೂ:4 |
| ತಂದೆಯ ಹೆಸರು | ಲೇಟ್ ಚಿಕ್ಕಸೋಮಣ್ಣಚಾರಿ | | |
| ವಯಸ್ಸು | 50 ವರ್ಷ | | |
| ಉದ್ಯೋಗ | ಚಿನ್ನ ಬೆಳ್ಳಿ ವ್ಯಾಪಾರಿ | | |
| ವಾಸಸ್ಥಳ | ಮಂಜುನಾಥ ಬಡಾವಣೆ,<br>ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಿಪಿ.3 ಅಮಾನತ್ತು ಮಹಜರ್ ನಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ. 3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2019 ರಲ್ಲಿ ಠಾಣೆಯಲ್ಲಿ ನನ್ನನ್ನು ಚಿನ್ನ ಪರೀಕ್ಷಿಸಲು ಕರೆಸಿದ್ದರು. ಅಲ್ಲಿ ಒಂದು ಕಬ್ಬಿಣದ ರಾಡ್ ಇದ್ದು, ಅದನ್ನು ಅಮಾನತ್ತು ಮಾಡಿಕೊಂಡರು. ಬ್ರಾಸ್ಲೈಟ್, ಐದಾರು ತರಹದ ಚಿನ್ನದ ಒಡವಗೆಳನ್ನು ಪರೀಕ್ಷಿಸಿರುತ್ತೇನೆ. ಆಗ ಸಮಯ ಬೆಳಗಿನ ಜಾವ ಆಗಿತ್ತು. ಆಗ ನನ್ನ ಜೊತೆ ಇಬ್ಬರು ಮೂವರು ಜನ ಇದ್ದರು. ಈ ದಿನ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಆ ದಿನ ನಾನು ಠಾಣೆಯಲ್ಲಿ ನೋಡಿದ್ದೆ. ಈ ವಿಚಾರವಾಗಿ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ. ಬೆಳ್ಳಿ

ಮತ್ತು ಚಿನ್ನವನ್ನು ಅಮಾನತ್ತು ಪಡಿಸಿಕೊಳ್ಳುವ ಕಾಲಕ್ಕೆ ತೆಗೆದ 7 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.4 ರಿಂದ 10 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲು ಸಸಅ ರವರಿಂದಃ–**

ದಿಃ 21.10.2019 ರಂದು ಕಳ್ಳತನ ಆಗಿರುವಂತಹ ಚಿನ್ನಗಳನು ಪರೀಕ್ಷೆ ಮಾಡುವಾಗ ನನ್ನ ಮುಂದೆ 1 ಬ್ರಾಸ್ಲೈಟ್ 20 ಗ್ರಾಂ, 1 ಚಿನ್ನ ಉಂಗುರ 5 ಗ್ರಾಂ, 1 ಜೊತೆ ಚಿನ್ನದ ಓಲೆ 4 ಗ್ರಾಂ, ಒಟ್ಟು 35 ಗ್ರಾಂ ಚಿನ್ನವನ್ನು ನಾನು ಪರೀಕ್ಷೆ ಮಾಡಿದ್ದು, ನನ್ನ ಸಮಕ್ಷಮ ಪೊಲೀಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಆ ಸಮಯದಲ್ಲಿ ಬೆಳ್ಳಿಯ ಆಭರಣಗಳನ್ನು ತೂಕ ಮಾಡಿದ್ದು ಒಂದು ಶ್ರೀ ಲಕ್ಷ್ಮಿ ದೇವರ ಮುಖವಾಡ 313 ಗ್ರಾಂ 500 ಮಿಲಿ ತೂಕ, ಬೆಳ್ಳಿಯ ದೀಪಾಲೆಕಂಬಗಳು 134.200 ಮಿಲಿ ತೂಕ, 1 ಬೆಳ್ಳಿಯ ಉಡುದಾರ 48 ಗ್ರಾಂ, 500 ಮಿಲಿ ತೂಕ, 1 ಬೆಳ್ಳಿಯ ತಟ್ಟೆ 242.700 ಮಿಲಿ ತೂಕ ಇವೆಲ್ಲವನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಹಾಗೆ ನನ್ನ ಸಮಕ್ಷಮ ಕೆಎ 45 ಎಲ್ 4620 ಹೊಂಡಾ ಡಿಯೊ ಸ್ಕೂಟರ್ ಅನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಸ್ಕೂಟರ್ ನ ಡಿಕ್ಕಿ ಒಳಗೆ ಇದ್ದ ಕಬ್ಬಿಣದ ರಾಡ್ ಅನ್ನು ಸಹ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ.ಇವೆಲ್ಲಾ ಅದಾಗ ಸಮಯ ಬೆಳಗಿನ ಜಾವ ಸುಮಾರು 1.00 ರಿಂದ 3.00 ಗಂಟೆ ಆಗಿತ್ತು ಎಂದರೆ ಸರಿ. ಆಗ ನನ್ನ ಜೊತೆ ಚಾಸಾ 3 ಮತ್ತು 4 ಅಭಿಶೇಕ್ ಮತ್ತು ವೀರಭದ್ರ ಎಂಬುವವರು ಇದ್ದರು ಎಂದರೆ ಸರಿ. 1 ನೇ

ಆರೋಪಿ ಜೊತೆ ಕಿರಣ್ ಎಂಬುವವರು ಸಹ ಇದ್ದರು ಎಂದರೆ ಸರಿ. ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಎನ್.ಪಿ ವಕೀಲರ ಪರವಾಗಿ ಶ್ರೀ ಪಿ.ಎಂ.ಪಿ ವಕೀಲರಿಂದಃ**

ಶ್ರೀ ಪಿ.ಎಂ.ಪಿ ವಕೀಲರು ಪಾಟೀ ಸವಾಲಿಗೆ ಕಾಲಾವಕವಾಶ ಕೋರಿದ್ದು, ಮುಂದೂಡಲು ಸಕಾರಣಗಳು ಇಲ್ಲದ ಕಾರಣ, ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.